ದಿನಾಂಕ: ಜುಲೈ 24, 2007

## ಲೇವಾದೇವಿ ಕಾನೂನು ಪುನರಾವಲೋಕನ ಮಾಡಲು ನೇಮಕಗೊಂಡಿರುವ ತಾಂತ್ರಿಕ ಪರಿಣತರ ವರದಿಗೆ ಪ್ರತಿಕ್ರಿಯೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಆಹ್ವಾನಿಸುತ್ತದೆ.

2006–2007 ರ ವಾರ್ಷಿಕ ನೀತಿ ವರದಿಯ 153 ನೆಯ ಪ್ಯಾರಾದಲ್ಲಿ ಲೇವಾದೇವಿ ವ್ಯವಹಾರದ ಕಾನೂನು ಪುನರಾವಲೋಕನ ಮಾಡುವ ತಂಡವೊಂದನ್ನು ರಚಿಸುವ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಟಿಸಿತ್ತು. (ಅ) ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುವ ಪ್ರಸಕ್ತ ಕಾನೂನು–ಚೌಕಟ್ಟಿನ ದಕ್ಷತೆಯ ಪುನರಾವಲೋಕನ (ಆ) ವಿಭಿನ್ನ ರಾಜ್ಯಗಳಲ್ಲಿನ ಅನುಷ್ಠಾನ ಕ್ರಮದ ಪುನರಾವಲೋಕನ (ಇ) ಗ್ರಾಮೀಣ ಸಮುದಾಯದ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಕಾನೂನು ಹಾಗೂ ಅನುಷ್ಠಾನ ಕ್ರಮಗಳ ಸುಧಾರಣೆಗಾಗಿ ರಾಜ್ಯ ಸರಕಾರಗಳಿಗೆ ಶಿಫಾರಸು ಮಾಡುವುದೇ ಈ ಕಾರ್ಯ ತಂಡದ ರಚನೆಯ ಹಿಂದಿನ  ಉದ್ದೇಶ.

ಇದರನ್ವಯ ಅಂದಿನ ಭಾ.ರಿ.ಬ್ಯಾಂಕಿನ ಪ್ರಭಾರಿ ಕಾನೂನು ಸಲಹೆಗಾರ ಶ್ರೀ ಎಸ್.ಸಿ.ಗುಪ್ತಾ ಅವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಪರಿಣತರ  ಸಮಿತಿಯೊಂದನ್ನು ರಚಿಸಲಾಗಿತ್ತು. ಮೂರು ಆಯ್ದ ಸರಕಾರಗಳ ಕಾರ್ಯದರ್ಶಿಗಳು  ಹಾಗೂ ಭಾ.ರಿ.ಭ್ಯಾಂಕಿನ ವರಿಷ್ಠ ಅಧಿಕಾರಿಗಳು ಮತ್ತು ಇತರ ಹನ್ನೊಂದು ರಾಜ್ಯ ಸರಕಾರಗಳ ಆಮಂತ್ರಿತರನ್ನೂ ಸಮಿತಿ ಹೊಂದಿತ್ತು.

ತಾಂತ್ರಿಕ ಪರಿಣಿತರ ಸಮಿತಿಯು ವ್ಯಾಪಕ ಸಮಾಲೋಚನಾ ವಿಧಾನದ ಮೂಲಕ, ದೇಶದ ಬೇರೆ ಬೇರೆ ಭಾಗದಲ್ಲಿ ಚಾಲ್ತಿಯಲ್ಲಿರುವ ಲೇವಾದೇವಿ ವ್ಯವಹಾರದ ಪದ್ಧತಿಯನ್ನು ಅಭ್ಯಸಿಸಿ, ಸಮೀಕ್ಷೆಗಳ ಮೂಲಕ ವಾಸ್ತವ ಸ್ಥಿತಿಯನು ಖಚಿತಪಡಿಸಿಕೊಂಡು, ಅಧಿಕೃತ ಹಣಕಾಸಿನ ಸಂಸ್ಥೆಗಳ ಜೊತೆ ಲೇವಾದೇವಿದಾರರು ಸಂಪರ್ಕ ಹೊಂದಿರುವ ಸಾಧ್ಯತೆಯನ್ನು ಪರಿಶೀಲಿಸಿ, ಲೇವಾದೇವಿ ಚಟುವಟಿಕೆಗಳನ್ನು ನಿಯಂತ್ರಿಸಲು ಇರುವ ಅಂತಾರಾಷ್ಟ್ರೀಯ ವಿಧಾನಗಳನ್ನು  ಅವಲೋಕಿಸಿತು.

ಲೇವಾದೇವಿ ವ್ಯವಹಾರಗಳ ನಿಯಂತ್ರಣಕ್ಕೆ ಪರ್ಯಾಯವಾಗಿ ಸಮಗ್ರ ಕಾನೂನನ್ನು ಪ್ರಸಕ್ತ ಹೊಂದಿರದ ರಾಜ್ಯಗಳು, ಒಂದು ಮಾದರಿ ಕಾನೂನನ್ನು ಪರಿಗಣಿಸಲು ಮತ್ತು ಅಳವಡಿಸಿಕೊಳ್ಳಲು ತಾಂತ್ರಿಕ ಪರಿಣತರ ಸಮಿತಿಯು ಶಿಫಾರಸುಗಳನ್ನು ಮಾಡಿದೆ. ಉದ್ದೇಶಿತ ಮಾದರಿ ಕಾನೂನು ಅಂತಾರಾಷ್ಟ್ರೀಯ ಹಾಗೂ ದೇಶೀಯವಾಗಿ ಲಭ್ಯವಿರುವ ಇದೇ ರೀತಿಯ ಕಾನೂನುಗಳ ಪ್ರಧಾನ ಅಂಶಗಳನ್ನು ಪ್ರತಿಬಿಂಬಿಸುತ್ತದೆ. ಪರಿಣತರ ಸಮೂಹವು, ತ್ವರಿತ, ಔಪಚಾರಿಕ ಹಾಗೂ ವ್ಯಾಜ್ಯಗಳ ಸುಲಭ ಇತ್ಯರ್ಥ ಮತ್ತು ಉತ್ತಮ ಅನುಷ್ಠಾನಕ್ಕಾಗಿ, ಚಾಲ್ತಿಯಲ್ಲಿರುವ ಕಾನೂನುಗಳಿಗೆ ಕೆಲವು ಶಿಫಾರಸುಗಳನ್ನು ಮಾಡಿದೆ. ಪ್ರಸ್ತುತ, ಪರಿಣತರ ಸಮಿತಿಯ ಉದ್ದೇಶಿತ ಮಾದರಿ ಕಾನೂನು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ;

- ಲೇವಾದೇವಿದಾರರ ಕಡ್ಡಾಯ ನೋಂದಣಿ ಮತ್ತು ಕಾಲಕಾಲಕ್ಕೆ ನೋಂದಣಿಯ ನವೀಕರಣ;
- ಉತ್ತಮ ಅನುಷ್ಠಾನ ವಿಧಾನ ಖಚಿತಪಡಿಸಿಕೊಳ್ಳಲು ಸರಳ ವ್ಯಾಜ್ಯ ವಿಲೇವಾರಿ ಆಡಳಿತ ಯಂತ್ರ;

- ಲೇವಾದೇವಿದಾರರು ವಿಧಿಸಬಹುದಾದ ಗರಿಷ್ಠ ಬಡ್ಡಿದರದ  ಮಿತಿ ನಿಯಂತ್ರಿಸಲು ದಂಡುಪತ್ ನಿಯಮವನ್ನು ಅಳವಡಿಸಿಕೊಳ್ಳುವುದು; ಮತ್ತು
- ಮಾರುಕಟ್ಟೆ ದರದ ಅನುಸಾರ ಗರಿಷ್ಠ ಬಡ್ಡಿ ದರವನ್ನು ಕಾಲಕಾಲಕ್ಕೆ ನಿರ್ಧರಿಸುವುದು.

ಅಧಿಕೃತ ಮತ್ತು ಅನಧಿಕೃತ ಲೇವಾದೇವಿದಾರರ ನಡುವೆ ಸಂಪರ್ಕ ಸ್ಥಾಪಿಸುವ ಸಾಧ್ಯತೆಯನ್ನು ಸಹ ತಾಂತ್ರಿಕ ಪರಿಣತರ ಸಮೂಹವು ಪರಿಶೀಲಿಸಿದೆ. ಈ ಮೂಲಕ ಆದ್ಯತಾ ವಲಯಕ್ಕೆ 'ಸಾಂಸ್ಥಿಕ ಸಾಲ ನೀಡಿಕೆದಾರ'ರಾಗಿರುವ ಲೇವಾದೇವಿದಾರರನ್ನು ಕೆಲವು ಸುರಕ್ಷಿತ ಕ್ರಮಗಳಿಗೆ ಒಳಪಡಿಸಿ, ಹೆಚ್ಚುವರಿ ಸಾಲ ನೀಡುವ ಒಂದು ಮಾರ್ಗವಾಗಿ ಪರಿಗಣಿಸಬಹುದಾಗಿದೆ.

ಸಮಿತಿಯು ತನ್ನ ವರದಿಯನ್ನು ಈಗ ಸಲ್ಲಿಸಿದ್ದು, ಇದು ಭಾರತೀಯ ರಿಸರ್ವ್ ಬ್ಯಾಂಕಿನ ವೆಬ್‌ತಾಣದಲ್ಲಿ(www.rbi.org.in.) ಲಭ್ಯವಿದೆ. ಈ ವರದಿಯಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ತಾಂತ್ರಿಕ ಪರಿಣತರ ಸಮಿತಿಯು ಸದಸ್ಯರ ಅಭಿಪ್ರಾಯಗಳೇ ಹೊರತು ಅವರು ಪ್ರತಿನಿಧಿಸುತ್ತಿರುವ ಸಂಸ್ಥೆಗಳ ಅಭಿಪ್ರಾಯಗಳಾಗಿರುವುದಿಲ್ಲ.

ಸಂಬಂಧಪಟ್ಟವರು ತಾಂತ್ರಿಕ ಪರಿಣತರ ಸಮಿತಿಯ ಶಿಫಾರಸುಗಳ ಬಗ್ಗೆ ತಮ್ಮ ಪ್ರತಿಕ್ರಿಯೆಗಳನ್ನು ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ ನಾಲ್ಕು ವಾರಗಳ ಒಳಗಾಗಿ, ಶ್ರೀ ಜಿ.ಶ್ರೀನಿವಾಸನ್, ಮುಖ್ಯ ಮಹಾ ವ್ಯವಸ್ಥಾಪಕರು, ಗ್ರಾಮೀಣ ಯೋಜನೆ ಮತ್ತು ಉದ್ದರಿ ಇಲಾಖೆ, ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಕಚೇರಿ, ಶಾಹಿದ್ ಭಗತ್ ಸಿಂಗ್ ರಸ್ತೆ, ಮುಂಬೈ–400001, ಅಥವಾ ಇ–ಮೇಲ್ ಮೂಲಕ ಕಳುಹಿಸಬಹುದು.

ಜಿ.ರಘುರಾಜ್<br>ಉಪ ಮಹಾ ವ್ಯವಸ್ಥಾಪಕರು.

**ಪತ್ರಿಕಾ ಪ್ರಕಟಣೆ: 2007–2008/114**